# ರಂಗಯ್ಯ ನಿನ್ನ ಯಾರೇನೆಂದರೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** Lyrics in these above references are same and the singer has followed these wordings.

ರಾಗ: ಸುರುಟಿ ತಾಳ: ಛಾಪು

ರಂಗಯ್ಯ ನಿನ್ನ ಯಾರೇನೆಂದರೊ || ಪ ||

ಸಕಲ ಭಾಗವತರು ಗತಿ ತಾಳ ಮೇಳದಿಂದ
ತಕ ಕಿಟ ಕಿಟ ತಕ ಧಿಮಿಕೆಂದು ಕುಣಿವಾಗ || ಅಪ ||

ಸಕ್ಕರೆ ಚೀಣಿ ಹಾಲಿನ ಕೆನೆ ರಸದಿಂದ
ಉಕ್ಕುವ ನೊರೆ ಹಾಲನು ಮೆದ್ದ ಕೃಷ್ಣಯ್ಯ || 1 ||

ದ್ರುಪದನ ಮಗಳ ಸೀರೆಯ ಸೆಳೆವಾಗ
ಕೃಪೆಯಿಂದ ಅಕ್ಷಯವಿತ್ತ ದೇವನೆ ನಿನ್ನ || 2 ||

ಜಗದೊಡೆಯ ಮೂಡಲ ಗಿರಿಯ ಕೋನೇರಿ ತಿಮ್ಮ
ಅಗಣಿತ ಮಹಿಮ ಶ್ರೀ ಪುರಂದರ ವಿಠಲ ನಿನ್ನ || 3 ||

## ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

**ಸಕ್ಕರೆ ಚೀಣಿ** = ಸಕ್ಕರೆ; ತುಂಬ ಬೆಳ್ಳಗಿರುವ ಸಕ್ಕರೆ.

**ಮೂಡಲಗಿರಿಯ ಕೋನೇರಿ ತಿಮ್ಮ** = ತಿರಮಲೆ ಬೆಟ್ಟದ ಮೇಲಿರುವ ಕೊಳದ (ಸ್ವಾಮಿ ಪುಷ್ಕರಿಣಿಯ) ದಂಡೆಯ ಮೇಲಿರುವ ದೇವರು.

**Classification:** Keerthane

**Ankita:** sri purandara vittala

**Location:** Tirupati

**Category:** Srinivasa Stuti

**Sub-Category:** srinivasa, ranga, bhagavata, sakkare, halu, Krishna, draupadi, Akshaya, deva, loka, Tirupati, aganita,

**Pravachana:** NA

**Explanation:** NA